ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಕೇಂದ್ರದ ಗೌತಮ ಓಣಿಯಲ್ಲಿ ವಾಸವಿರುವ ಕಾಳಮ್ಮ ಚೆಲುವಾದಿ ಅಪರೂಪದ ಜನಪದ ಗಾಯಕಿ. ಬಹುಪಾಲು ಎಲ್ಲ ಬಗೆಯ ಜನಪದ ಹಾಡುಗಳನ್ನು ಅವುಗಳ ಮೂಲಮಟ್ಟುಗಳಲ್ಲಿ ಸುಶ್ರಾವ್ಯವಾಗಿ ಹಾಡುವ ಈ ಗಾಯಕಿಗೆ 1995ರ ಸಾಲಿನ ಕರ್ನಾಟಕ ಜಾನಪದ ಅಕಾಡೆಮಿಯ ಗೌರವ ಪ್ರಶಸ್ತಿ ಲಭಿಸಿದೆ. ಮಾತಿಗೆಳೆದಾಗ ಅವರು, 'ಅಷ್ಟೇರಿ', 'ಇದಕ್ಕಿಂತ ಹೆಚ್ಚಿಗೇನು ಬೇಕ್ರಿ' ಎನ್ನುತ್ತ ಸಂಕೋಚದ ಚಿಪ್ಪೊಳಗೆ ಸೇರಿಕೊಳ್ಳುತ್ತಾರೆ. ಹಾಡಿಗೆಳೆದರೆ ದಣಿವಿಲ್ಲದಂತೆ ಒಂದರ ಹಿಂದೊಂದು ಹಾಡನ್ನು ಪೋಣಿಸುತ್ತ ಹಾಡುತ್ತ ಸಾಗುತ್ತಾರೆ. ಮಾತಾಡುವಾಗಿನ ಸಂಕೋಚದ ಪರದೆ ಪದ ಹಾಡುವಾಗ ಕಿತ್ತು ಹೋಗುತ್ತದೆ. ಇನ್ನೂ ಹಾಡುವೆನೆಂಬ ಹುಮ್ಮಸ್ಸಿಗೆ ಅವರ ಮಡಿಲೊಳಗೆ ಬೆಚ್ಚಗೆ ಮಲಗಿರುವ ಹಾಡುಗಳೇ ತಲೆದೂಗುತ್ತವೆ. ಅಂಥ ಹಾಡುಗಳ ಅಮ್ಮನೊಂದಿಗೆ ಕೇವಲ ಬರೆದುಕೊಳ್ಳುವ ಒಬ್ಬ ಮಗನು ದಾಖಲಿಸಿದ ಮಾತುಗಳಿವು.



**◆ ಅಮ್ಮಾ ನಮಸ್ಕಾರ. ಪದಗಳನ್ನ ಹಾಡಿಕೆಂತ, ಹಾಡಿಕೆಂತ ನಿನ್ನ ಬದುಕನ್ನೂ ಹಸನ ಮಾಡಿಕೆಂಡು; ನಮ್ಮ ಬದುಕನ್ನೂ ಹಸನ ಮಾಡಿದಾಕಿ ನೀನು. ಈ ಪದಗಳನ್ನ ಹಾಡೋದು ಕಲಿತಿದ್ದು ಯಾವಾಗಮ್ಮ?**

ನಾನಿನ್ನ ದೊಡ್ಡಾಕಿ ಆಗಿರಲಿಲ್ಲ. ಓಣ್ಯಾಗ ಮಂದೆಲ್ಲ ಪದ ಹಾಡೋರು. ಕುಟ್ಟುವಾಗ, ಬೀಸುವಾಗ, ಮೈ ನೆರೆತಾಗ, ಮದಿವ್ಯಾಗ, ಸೋಬಾನ ಕಾಲಕ್ಕ, ತೊಟ್ಟಲಕ ಹಾಕುವಾಗ, ಸತ್ತಾಗ... ಹಿಂಗ ಎಲ್ಲನ್ನ ನೋಡ್ರೀ, ಯಾವದನ್ನ ಕಾರ್ಯೆವು ಇರ್ಲಿ ಅಲ್ಲೆಲ್ಲ ಪದ ಹಾಡ್ತಿದ್ರು. ನಮ್ಮ ಚಿಗಮ್ಮ ಮತ್ತೆ ನಮ್ಮ ಓಣ್ಯಾಗಿನ ಶಿವಪ್ಪನ ತಾಯಿ ತಿಪ್ಪಮ್ಮ ಇನ್ನ ಕೆಲವರು ಭಾಳ ಚೊಲೊತ್ಯಾಗಿ ಪದಗಳನ್ನ ಹಾಡೋರು. ಜೋಕುಮಾರನ ಹುಣಿವ್ಯಾಗ ಜೋಕುಮಾರನ ಪುಟ್ಟಿ ಹೊತಗಂಡು ಮನಿಮನಿಗೆ ಬಂದು ಹಾಡ್ತಿದ್ರು. ಅವೆಲ್ಲ ನನಗ ಭಾಳ ಪಸಂದಾಗ್ತಿದ್ವು. ಹಂಗಾಗಿ ಎಲ್ಲೆಲ್ಲಿ ಪದ ಹಾಡ್ತಿದ್ರು ಅಲ್ಲಿಗೆಲ್ಲ ಹೋಗ್ತಿದ್ದೆ. ಅವ್ರು ಮುಂದ ಮುಂದ; ನಾನು ಹಿಂದ ಹಿಂದ. ಅವರು ಮುಂದ ಹಾಡೋರು, ನಾವು ಸಣ್ಣ